ದಿನಾಂಕಃ **25.04.2025** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ 1 ರಿಂದ 3 ನೇ ಪ್ರತಿವಾದಿ ಪರ ಮಾನ್ಯ ಶ್ರೀ NNR ವಕೀಲರಿಂದಃ**

ಈಗ ಕಾಣುತ್ತಿರುವ ಪೋಟೋಗಳಲ್ಲಿ ಇರುವುದು ನನ್ನ ತಂದೆ ಮತ್ತು ತಾಯಿ ಎಂದರೆ ಸರಿ. ಸದರಿ ಪೋಟೋಗಳನ್ನು ಸಾಕ್ಷಿಯು ಗುರುತಿಸಿದ ಮೇರೆಗೆ ಅವುಗಳನ್ನು ನಿಡಿ-**5** ರಿಂದ **10** ಎಂದು ಗುರುತಿಲಾಯಿತು. ನನ್ನ ತಾಯಿ ಹೆಸರು ಗೋವಿಂದಮ್ಮ. ಸದರಿಯವರು ಈಗ ನೋಡುತ್ತಿರುವ ದಾಖಲೆಗಳಂತೆ ಕೆ ಎಂ ಆಸ್ಪತ್ರೆ ಅನಂತಪುರದಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು ಎಂದರೆ, ಅವರು ಚಿಕಿತ್ಸೆ ಪಡೆಯುತ್ತಿದ್ದರು ಆದರೆ ದಾಖಲೆಗಳ ಬಗ್ಗೆ ನನಗೆ ಗೊತ್ತಿಲ್ಲ. ನಾನು ಎ ಸಿ ನ್ಯಾಯಾಲಯದಲ್ಲಿ ಹೂಡಿದ ಪ್ರಕರಣದ ಸಂಖ್ಯೆ ಆರ್ ಆರ್ ಟಿ ಅಪೀಲು **77/2020-21** ಎಂದರೆ ಸರಿ. ಸದರಿ ಅಪೀಲು ವಿಭಾಗ ಆಗಿದೆ ಎಂದು ವಜಾ ಮಾಡಿರುತ್ತಾರೆ ಎಂದರೆ ಅವರು ಪೋರ್ಜರಿ ಮಾಡಿಕೊಂಡು ವಿಭಾಗ ಮಾಡಿಕೊಂಡಿರುತ್ತಾರೆ. ನನ್ನ ತಂದೆ ಮಕ್ಕಳಿಗೆ ಹಂಚಿಕೆ ಮಾಡಿಕೊಟ್ಟಿರುವುದಾಗಿ ಆದರೆ ಅವರ ಭಾಗದ ಹುಣಸೆ ಮರಗಳಿಗೆ ತೊಂದರೆ ಕೊಡುತ್ತಿರುವುದಾಗಿ ದೂರು ನೀಡಿರುತ್ತಾರೆ ಎಂದರೆ ಸರಿ.

ಈಗ ನೋಡುತ್ತಿರುವ ಸಹಿ ನನ್ನದೆ. ಸದರಿ ದಿ.**20.12.2006** ರ ಕ್ರಯ ಪತ್ರದ ನಕಲನ್ನು ಸಾಕ್ಷಿಯು ಗುರುತಿಸಿದ ಮೇರೆಗೆ ನಿಡಿ-**11** ಎಂದು, ಸಾಕ್ಷಿಯ ಸಹಿಯನ್ನು ನಿಡಿ-**11**(ಎ) ಎಂದು ಗುರುತಿಲಾಯಿತು. ಈಗ ನೋಡುತ್ತಿರುವ ದಾಖಲೆಯಂತೆ ನಾನು ದಿ.**24.05.2012** ರಂದು ಒಪ್ಪಿಗೆ ಪತ್ರ ಬರೆದುಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಈಗ ನೋಡುತ್ತಿರುವ ದಾಖಲೆಯಂತೆ ನಾನು ನನ್ನ ಅಣ್ಣ ತಮ್ಮಂದಿರಿಗೆ ದಿ.**20.12.2006** ರಂದು ಹಕ್ಕಲು ಬಿಡುಗಡೆ ಪತ್ರ ಬರೆದುಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಈಗ ನೋಡುತ್ತಿರುವ ದಾಖಲೆಯಂತೆ ವಿಭಾಗ ಮಾಡಿಕೊಂಡ ನಂತರ ದಿ.**09.12.2010** ರಂದು ನನ್ನ ತಂದೆ

ತಾಯಿಯ ಬಳಿ ನೊಂದಾಯಿತ ವಿಲ್ ಬರೆಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ, ನನಗೆ ವಿಲ್ ಬಗ್ಗೆ ಗೊತ್ತೇ ಇಲ್ಲ. ಈಗ ನೋಡುತ್ತಿರುವ ದಿ.**09.06.2016** ರ ದಾಖಲೆಯಲ್ಲಿ ಇರುವ ಸಹಿ ನನ್ನದಲ್ಲ. **6** ನೇ ಪ್ರತಿವಾದಿ ಹೆಸರಿಗೆ ರೆವೆನ್ಯೂ ದಾಖಲೆಗಳು ಆಗಿರುತ್ತವೆ ಎಂದರೆ, ನನಗೆ ತಿಳಿಯದಂತೆ ಮಾಡಿಕೊಟ್ಟಿರುತ್ತಾರೆ. ತಿಳಿದ ನಂತರ ಎ ಸಿ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿರುತ್ತೇನೆ. ಅದರ ಸಂಖ್ಯೆ ಗೊತ್ತಿಲ್ಲ. ಸದರಿ ಪ್ರಕರಣದ ವಿಚಾರಣೆಗೆ ಬಾಕಿ ಇರುತ್ತದೆ. ಅದನ್ನು ಹಾಜರುಪಡಿಸಲು ತೊಂದರೆ ಇಲ್ಲ. **6** ನೇ ಪ್ರತಿವಾದಿ ಬೋರ್ ವೆಲ್ ಹಾಕಿಸಿ ವ್ಯವಸಾಯ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ, ನಾವು ಹಾಕಿಸಿರುತ್ತೇವೆ. ಈ ಬಗ್ಗೆ ದಾಖಲೆ ಸಲ್ಲಿಸಿಲ್ಲ. ಬೋರ್ ವೆಲ್ ನ ವಿದ್ಯುತ್ ಸಂಪರ್ಕ **6** ನೇ ಪ್ರತಿವಾದಿಯ ಹೆಸರಿನಲ್ಲಿ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. **6** ನೇ ಪ್ರತಿವಾದಿ ಓ.ಎಸ್.**75/2014** ರಂತೆ ದಾವೆ ಸಲ್ಲಿಸಿರುತ್ತಾರೆ ಎಂದರೆ ಸರಿ. ಸದರಿ ದಾವೆಯನ್ನು ನಾನು ವಕೀಲರನ್ನು ನೇಮಕ ಮಾಡಿಕೊಂಡು ನಡೆಸಿರುತ್ತೇನೆ ಎಂದರೆ ಸರಿ. ಸದರಿ ದಾವೆ ಡಿಕ್ರಿಯಾಗಿರುತ್ತದೆ ಎಂದರೆ ಸರ್, ನಾವು ಅಪೀಲು ಸಲ್ಲಿಸಿರುತ್ತೇವೆ.

ದಾವಾ ಐಟಂ ನಂ.**4** ನನ್ನ ತಂದಗೆ ಓ.ಎಸ್.**479/1994** ರಲ್ಲಿ ಡಿಕ್ರಿಯಂತೆ ಬಂದಿರುತ್ತದೆ ಎಂದರೆ ಸರಿ. **2** ನೇ ವಾದಿಗೂ ಸಹ ನನ್ನ ತಂದೆ **4** ಎಕರೆ ಜಮೀನು ಕೊಡಿಸಿದ್ದರು ಎಂದರೆ ಸರಿಯಲ್ಲ. ಕನಕಪುರದ **4** ಎಕರೆ ಜಮೀನು ಈಗಲೂ **2** ನೇ ವಾದಿಯ ಹೆಸರಿನಲ್ಲಿ ಇದೆ ಎಂದರೆ ಅದನ್ನು ಅವರು ಸ್ವಂತವಾಗಿ ಮೊತಕಲ ಪಲ್ಲಿ ತಿಮ್ಮಾರೆಡ್ಡಿ ರವರಿಂದ ಖರೀದಿ ಮಾಡಿರುತ್ತಾರೆ. ಎಷ್ಟು ಹಣಕ್ಕೆ ಖರೀದಿ ಮಾಡಿದ್ದರು ಎಂದು ನನಗೆ ಗೊತ್ತಿಲ್ಲ. ಅವರಿಗೆ ಹೇಗೆ ಹಣ ಬಂದಿರುತ್ತದೆ ಎಂದು ಸಹ ನನಗೆ ಗೊತ್ತಿಲ್ಲ. ನನ್ನ ತಂದೆ ತಮ್ಮ ಹೆಣ್ಣು ಮಕ್ಕಳಿಗೆ ಮದುವೆ ಮಾಡಿ ಬಂಗಾರ ಕೊಟ್ಟು ನಮಗೂ ವಿಭಾಗ ಮಾಡಿಕೊಟ್ಟಿದ್ದರು ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಮಗೆ ಸರಿಯಾಗಿ ಭಾಗ ಮಾಡಿಕೊಟ್ಟಿಲ್ಲ. ನಮ್ಮ ತಂದೆ ತಾಯಿ ವೃದ್ದಾಪ್ಯದಲ್ಲಿ ಜೀವನ ಸಾಗಿಸಲು ಜಮೀನು ಮಾರಾಟ ಮಾಡಿದ್ದರು

ಅವರಿಗೆ ಕಿರುಕುಳ ಕೊಡುವ ಉದ್ದೇಶದಿಂದು ಸುಳ್ಳು ದಾವೆ ಸಲ್ಲಿಸಿ, ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖಾನದಂತೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿಯಾಗಿದೆಂದು ಒಪ್ಪಿರುತ್ತಾರೆ.

ಅಧಿಕ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಪಾವಗಡ.

ಸಾಕ್ಷಿ ಸಹಿಃ